1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**3825/2025**

ಹೆಸರುಃ  ಬಸವರಾಜ                                                         ಚಾಸಾಃ 1

ತಂದೆಯ   ಹೆಸರುಃ   ತಿಪ್ಪೆಸ್ವಾಮಿ                                                  ಪ್ರಾಸಾ: 1

ವಯಸ್ಸುಃ  27 ವರ್ಷ

ಉದ್ಯೋಗಃ  ಗಾರೆ ಕೆಲಸ

ವಾಸ ಸ್ಥಳಃ   ಹೆಂಬಾಳೆ ವಡ್ಡರಹಟ್ಟಿ ಕೂಡ್ಲಿಗಿ ತಾಃ ವಿಜಯನಗರ ಜಿಲ್ಲೆ

ಸಾಕ್ಷಿಗೆ ದಿನಾಂಕಃ 20-12-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಮೃತ ಧನರಾಜ್ ನನ್ನ ತಮ್ಮ.

ಈಗ್ಗೆ 4 ತಿಂಗಳ ಹಿಂದೆ ಆತ ಉಷಾ ಕಂಟ್ರಾಕ್ಟರ್ ವತಿಯಿಂದ ಗಾರೆ ಕೆಲಸ ಮಾಡಲು ಚನ್ನಗಿರಿಗೆ ಬಂದಿದ್ದು, ಚನ್ನಗಿರಿಯಲ್ಲಿ ಉಳಿದುಕೊಂಡಿರುತ್ತಾನೆ.

ದಿಃ 17-01-2022 ರಂದು ಸಂಜೆ 6.30 ಕ್ಕೆ ಕೆಲಸ ಮುಗಿಸಿಕೊಂಡು ಬೈಕ್ ನಂ ಕೆಎ-35-ಇಕೆ-0755 ನಲ್ಲಿ ರೂಂ ಹತ್ತಿರ ಒಬ್ಬನೇ ಹೋಗುತ್ತಿರುವಾಗ ಚುಂಬನ ಡಾಬಾದ ಬಳಿ ಟ್ರಾಕ್ಟರ್  ಅತೀ ವೇಗವಾಗಿ ಬಂದು ಏಕಾ ಏಕಿ ಬಲಕ್ಕೆ ತಿರುಗಿಸಿದ ಕಾರಣ ಬೈಕ್ ಮುಂಭಾಗದ ಚಕ್ರಕ್ಕೆ ಬಡಿದು  ಅಪಘಾತವಾಗಿರುತ್ತದೆ.  ಸದರಿ ಟ್ರಾಕ್ಟರ್ ನಂ ಕೆಎ/18/ಟಿಇ-6801ಆಗಿದೆ. ಸದರಿ ಅಪಘಾತದಿಂದ ನನ್ನ ತಮ್ಮನ ತಲೆಗೆ ಕೈ ಗೆ , ಹೊಟ್ಟೆಗೆ ಪೆಟ್ಟು ಬಿದ್ದಿರುತ್ತದೆ. ಯಾರೋ ದಾರಿಹೋಕರು ಆತನನ್ನು  ಆಟೋದಲ್ಲಿ ಕರೆದುಕೊಂಡು ಬಂದು ಆಸ್ಪತ್ರೆಗೆ ಸೇರಿಸಿರುತ್ತಾರೆ. ಸದರಿ ವಿಚಾರವನ್ನು ನನಗೆ ಸ್ಥಳೀಯರು ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ.

ನಂತರ ನಾನು ಆಸ್ಪತ್ರೆ ಬಳಿ ಬಂದು ನನ್ನ ತಮ್ಮನ ಮೃತದೇಹ ಚನ್ನಗಿರಿಯ ಶವಾಗಾರದಲ್ಲಿರುತ್ತದೆ.  ನಂತರ ನಾನು ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ದೂರನ್ನು ನೋಡಿ ಗುರುತಿಸಿದ್ದು  ಅದನ್ನು  ನಿಪಿ-1 ಎಂದು,  ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು  ಗುರುತಿಸಲಾಯಿತು.

ದಿಃ18-01-2022 ರಂದು ನನ್ನನ್ನು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಪಂಚನಾಮೆ ಜರುಗಿಸಲು ಬಂದಿರುತ್ತಾರೆ. ಸದರಿ ಸಮಯಕ್ಕೆ ನನ್ನ ಜೊತೆ ಚಾಸಾ-6 ಮತ್ತು 7 ರವರ ಸಮಕ್ಷಮ ಸ್ಥಳವನ್ನು ತನಿಖೆಯನ್ನು ಮದ್ಯಾಹ್ನ 2.00 ಯಿಂದ 3.00 ಗಂಟೆವರೆಗೂ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನನ್ನ , ಚಾಸಾ-6 ಮತ್ತು 7 ರವರ ಸಹಿ ಪಡೆದಿರುತ್ತಾರೆ.

ಸಾಕ್ಷಿ ಕಡತದಲ್ಲಿನ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸದರಿ ಸಮಯಕ್ಕೆ ಒಂದು ಪೊಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ ಕಡತದಲ್ಲಿನ ಪೊಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

ನಂತರ ನಾವು ಆಸ್ಪತ್ರೆಗೆ ಹಿಂದಿರುಗಿರುತ್ತೇವೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆಯಾಗಿದ್ದು ಅದನ್ನು ನಿಪಿ-5 ಎಂದು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿಯನ್ನು ನಾನು ರಸ್ತೆಯನ್ನು ಅಳತೆಮಾಡುವ ಸಮಯಕ್ಕೆ ಮಾಡಿರುತ್ತೇನೆ. ಸದರಿ ವಾಹನ ತಡೆ ಪಂಚನಾಮೆಗೆ ನನ್ನ , ಚಾಸಾ-6 ಮತ್ತು 7 ರವರ ಸಹಿ ಪಡೆದಿರುತ್ತಾರೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ವಾಹನ ತಡೆಹಿಡಿದ ಪಂಚನಾಮೆಯಾಗಿದ್ದು ಅದನ್ನು ನಿಪಿ-6 ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿಯನ್ನು ನಾನು ಪಂಚಕಚೇರಿ ಬಳಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಸದರಿ ವಾಹನ ತಡೆ ಪಂಚನಾಮೆಯನ್ನು 3.00 ರಿಂದ 4.00 ರವರೆಗೂ ಜರುಗಿಸಿರುತ್ತಾರೆ. ಸದರಿ ವಾಹನ ತಡೆ ಪಂಚನಾಮೆ ಸಮಯಕ್ಕೆ ನನ್ನ ಜೊತೆ ಚಾಸಾ-6 ಮತ್ತು 7 ರವರ ಹಾಜರಿದ್ದು ಸಹಿ ಮಾಡಿರುತ್ತಾರೆ.

ಈಗ ನೋಡುತ್ತಿರುವ ಪೊಟೋಗಳಲ್ಲಿ ನಾನು ಇದ್ದೆನೆ. ಸಾಕ್ಷಿ ಕಡತದಲ್ಲಿನ ಪೊಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-7 ಮತ್ತು 8 ಎಂದು

ಗುರುತಿಸಲಾಯಿತು. ಸದರಿ ಫೊಟೋವನ್ನು ದಿಃ18-01-2022 ರಂದು ಚನ್ನಗಿರಿಯಲ್ಲಿ ತೆಗೆದಿರುತ್ತಾರೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ವಾಹನ ಮಾಲೀಕನಿಗೆ ಕೊಟ್ಟ ನೋಟಿಸಾಗಿದ್ದು ಅದನ್ನು ನಿಪಿ-9 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ದಿಃ 27-01-2022 ರಂದು ನಿಪಿ9 ಕ್ಕೆ ನೀಡಿದ ಉತ್ತರವಾಗಿದ್ದು ಅದನ್ನು ನಿಪಿ-10 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಇಂಡಿಮಿನಿಟಿ ಬಾಂಡ್ ಆಗಿದ್ದು ಅದನ್ನು ನಿಪಿ-11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಬರೆದ ವಿಚಾರ ನನೆ ಗೊತ್ತಿಲ್ಲ.

ಸದರಿ ನನ್ನ ತಮ್ಮನಿಗೆ ಅಪಘಾತಪಡಿಸಿದ ಟ್ರಾಕ್ಟರ್ ಚಾಲಕನ ಬಗ್ಗೆಯಾಗಲಿ ಅಥವಾ ಸದರಿ ಟ್ರಾಕ್ಟರ್ ನ ಬಗ್ಗೆ ತಿಳಿದುಕೊಂಡಿಲ್ಲ ಮತ್ತು ಸದರಿ ಚಾಲಕನನ್ನು ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು, ಮಹಜರು ಮತ್ತು ನೋಟಿಸಿಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು, ಮಹಜರು ಮತ್ತು ನೋಟಿಸನ್ನು ನೋಡಲಾಗಿ ಸಾಕ್ಷಿಯು ದೂರು, ಮಹಜರು ಮತ್ತು ನೋಟಿಸಿಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಟ್ರಾಕ್ಟರ್ ಚಾಲಕ ಯಾವುದೇ ಮೂನ್ಸೂಚನೆಯನ್ನು ನೀಡದೆ ಅತೀ ವೇಗವಾಗಿ ಬಂದು ಏಕಾ ಏಕಿ ಬಲಭಾಗಕ್ಕೆ ತಿರುಗಿಸಿದ ಕಾರಣ ನನ್ನ ತಮ್ಮನ ಬೈಕ್ ನ ಮುಂಭಾಗದ ಚಕ್ರಕ್ಕೆ ತಗುಲಿ ಅಪಘಾತವಾಯಿತು ಎಂರೆಸರಿ.

ದಿಃ 18-01-2022 ರಂದು ಬೆಳಿಗ್ಗೆ 10.30ರ ಸಮಯಕ್ಕೆ ನಾನು ಠಾಣೆಗೆ ಹಾಜರಾಗಿ ದೂರನ್ನು ದಾಖಲಿಸಿದ್ದೆನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಸಂತೋಷ್ ಡಾಬಾದ ಬಳಿ ಅಗಿದೆ ಎಂದರೆ ಸರಿ. ಅದೇ ದಿನ ಪೊಲೀಸರು ನನ್ನ ಸಮಕ್ಷಮ ನಿಪಿ2 ರಂತೆ ಮಹಜರನ್ನು ಜರುಗಿಸಿದರು ಎಂದರೆ ಸರಿ.

ನಿಪಿ-2ರ ಸಮಯಕ್ಕೆ ನಿಪಿ-3 ಮತ್ತು 4 ರಂತೆ ಫೊಟೋ ತೆಗೆದಿರುತ್ತಾರೆ ಎಂದರೆ ಸರಿ. ನಿಪಿ-2ರ ಸಮಯಕ್ಕೆ ಪೊಲೀಸರು ಅಪಘಾತ ನಡೆದಸ್ಥಳದ ಕಚ್ಚಾನಕಾಶೆಯನ್ನುತಯಾರಿಸಿ ಅದಕ್ಕೆ ನನ್ನ ಹಾಗೂ ಚಾಸಾ-6 ಮತ್ತು 7 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಪೊಲೀಸರು ಚನ್ನಗಿರಿಯ ಪೊಲೀಸ್ ವಸತಿ ಗೃಹದ ಕಾಪೌಂಡ್ ಅವರಣದಲ್ಲಿ ಅಪಘಾತದಲ್ಲಿ ಭಾಗಿಯಾದ ವಾಹನ ತಡೆ ಪಂಚನಾಮೆಯನ್ನು ನನ್ನ ಹಾಗೂ ಚಾಸಾ-6 ಮತ್ತು 7 ರವರ ಸಮಕ್ಷಮ ಮಧ್ಯಾಹ್ನ 3.30 ರಿಂದ 4.30ರವರೆಗೆ ಜರುಗಿಸಿದರು ಎಂದರೆ ಸರಿ. ನಿಪಿ-6ರ ಸಮಯಕ್ಕೆ ನಿಪಿ-7 ಮತ್ತು 8 ರಂತೆ ಫೊಟೋ ತೆಗೆದರು ಎಂದರೆ ಸರಿ.
ನಿದಿಃ 27-01-2022 ರಂದು ನನಗೆ ಪೊಲೀಸರು ನಿಪಿ-9 ರಂತೆ ನೋಟಿಸು ಜಾರಿಮಾಡಿದರು ದಿಃ 27-01-2022 ರಂದು ನನ್ನ ಮಾಲೀಕ್ವದ ಕೆಎ/35-ಇಕೆ-0755 ಬೈಕ್ ನ್ನುಯಾರುಚಾಲನೆ ಮಾಡುತಿತದ್ದರು ಮತ್ತು ಯಾರಿಗೆ ಕೊಟ್ಟಿರುತ್ತೀರಿ ಸದರಿ ಬೈಕ್ ನ ಆರ್ ಸಿ , ಡಿ ಎಲ್ ಮತ್ತು ವಿಮಾ ಪಾಲಿಸಿಯನ್ನು ಹಾಜರುಪಡಿಸುವಂತೆ ಕೋರಿದರು ಎಂದರೆ ಸರಿ. ನಾನು ಸದರಿ ನೋಟಿಸಿಗೆ ನಿಪಿ-10 ರಂತೆ ಸದರಿ ದಿನಾಂಕದಂದು ಸದರಿ ಬೈಕ್ ನ್ನು ನನ್ನ ತಮ್ಮ ಮೃತ ಧನರಾಜ್ ಚಲಾಯಿಸುತ್ತಿದ್ದಾಗಿ ಸದರಿ ಬೈಕ್ ನ ವಿಮೆ ಚಾಲನೆಯಲ್ಲಿರುವುದಿಲ್ಲವೆಂದು ಹಾಗೂ ಮೃತ ಧನರಾಜ್ ಚಾಲನಾ ಪತ್ರ ಹೊಂದಿರುವುದಾಗಿ ಮತ್ತು ಬೈಕ್ ನ ಆರ್ ಸಿ ಪತ್ರವನ್ನು ಹಾಜರುಪಡಿಸಿ ನಿಪಿ-10 ರಂತೆ ಉತ್ತರಿಸಿರುತ್ತೇನೆ ಎಂದರೆ ಸರಿ. ನಂತರ ನಾನು ನಿಪಿ-11 ರಂತೆ ಇಂಡಿಮಿನಿಟಿ ಬಾಂಡ್ ನ್ನು ಪೊಲೀಸರಿಗೆ ನೀಡಿರುತ್ತನೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಮಾನ್ಯ ಸ ಸ ಅ ರವರು ಸಮಯಾವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**